# ನೀವು ಕೇಳಿದಿರಿ?

ವಿ.ಎಸ್.ಹಿಂದೂಪುರ, ಬಳ್ಳಾರಿ

*ಮೂರ್ಖನ ಹೃದಯ ನಾಲಿಗೆಯಲ್ಲಿ, ಜ್ಞಾನಿಯ ನಾಲಿಗೆ ಹೃದಯದಲ್ಲಿ. ರಾಜಕಾರಣಿಗಳ ನಾಲಿಗೆ?*



ಹೈಕಮಾಂಡ್‌ನ ಪಾದರಕ್ಷೆಯ ಬಳಿ!

ಮನೋರಮಾ ಪ್ರಭು, ಕಾಸರಕೋಡ

*ಜಾತಿ, ಭೇದವಿಲ್ಲದ ಸ್ಥಳ ಯಾವುದು?*

ಕಬ್ಬನ್ ಪಾರ್ಕ್! ಇಲ್ಲಿ ಎಲ್ಲಾ ಜಾತಿಯ, ವರ್ಗದ ಪ್ರೇಮಿಗಳೂ ಕಾಣಸಿಗುತ್ತಾರೆ!

ವಿ. ಹಮೀದ್, ವಿಟ್ಲ

*ಬುದ್ಧಿವಂತ ಹುಡುಗಿಗೆ ಹೆಡ್ಡ ಹುಡುಗ ಪತಿಯಾಗಿ ಸಿಕ್ಕಿದರೆ ಸಂಸಾರ ಹೇಗಿದ್ದೀತು?*

ಎಲ್ಲಾ ಸಂಸಾರಗಳಂತೆಯೇ! ಹುಡುಗ ಹೆಡ್ಡನಾದರೆ ಪತಿ, ಬುದ್ಧಿವಂತನಾದರೆ ರಾಷ್ಟ್ರಪತಿ ಎನ್ನುವುದಕ್ಕೆ ಕಲಾಮರೇ ಸಾಕ್ಷಿ!

ವಿಜಯ್ ಹೆಮ್ಮಿಗೆ, ಮೈಸೂರು

*ಹೆಣ್ಣು ದೇವರಿಗೆ ಶ್ರೀಮತಿ ಎಂದೇಕೆ ಕರೆಯುವುದಿಲ್ಲ?*

ಕೇಳಿಕೇಳಿದ ಭಕ್ತರಿಗೆಲ್ಲಾ ಸಿಕ್ಕಸಿಕ್ಕ ವರ ನೀಡುವುದರಿಂದ ಹೆಣ್ಣು ದೇವತೆಗಳು ಮತಿಹೀನರಾಗಿದ್ದಾರಂತೆ!

ವಿದ್ಯಾ ಎನ್. ಪೈ, ಹೊನ್ನಾವರ

*ಅಳಿಯನಿಗೂ, ಮನೆ ಅಳಿಯನಿಗೂ ಏನು ವ್ಯತ್ಯಾಸ?*




ಮೊದಲನೆಯದು ಕಾಡಾನೆ, ಎರಡನೆಯದು ಸರ್ಕಸ್ ಆನೆ!

ಎಂ.ಬಿ. ಪ್ರೀತಿ ಪ್ರಜ್ವಲ್, ಬೆಂಗಳೂರು

*ಲಂಚ ಕೊಟ್ಟವರ ಪ್ರಶ್ನೆಗಳಿಗೆ ಮಾತ್ರ ಉತ್ತರಿಸುತ್ತೀರಂತೆ; ಲೋಕಾಯುಕ್ತರಿಗೆ ದೂರು ಕೊಡುತ್ತೇನೆ ರಾಮ್, ಹುಷಾರ್!*

ದೂರು ಕೊಟ್ಟರೆ ಅವರೂ ನನ್ನನ್ನು ಪ್ರಶ್ನಿಸಬಹುದು, ನನ್ನ ರೇಟ್ ಮೊದಲೇ ಅವರಿಗೆ ತಿಳಿಸಿಬಿಡಿ, ಪ್ಲೀಸ್!

ಸುಧಾ ವಿ. ರಾವ್, ಸಿಕಂದರಾಬಾದ್

*ಹಿಂದಿನ ಕಾಲದಲ್ಲಿ ರಾಜರನ್ನು ಹೊಗಳುವಾಗ ಸಾಲು ಮರಗಳನ್ನು ನೆಡಿಸಿದನು, ಕುಡಿಯುವ ನೀರಿನ ಬಾವಿಗಳನ್ನು ತೋಡಿಸಿದನು ಎಂದೆಲ್ಲಾ ಹೇಳುತ್ತಿದ್ದರು, ಈಗಿನ ರಾಜಕಾರಣಿಗಳನ್ನು...?*

ಸಾಲ ಮನ್ನಾಗಳನ್ನು ಮಾಡಿಸಿದನು, ಕುಡುಕರಿಗೆ ಮೋರಿಗಳನ್ನು ತೋಡಿಸಿದನು, ರೇವ್ ಪಾರ್ಟಿಗಳನ್ನು ನಡೆಸಿದನು.....!

ರೆಮಿತ್ ಸಿಕ್ವೇರಾ, ಹೊಸನಗರ

*ಒಂದೇ ದಿನದಲ್ಲಿ ಫೇಮಸ್ ಆಗಬೇಕಾದರೆ ಏನು ಮಾಡಬೇಕು?*

ಯಾವುದಾದರೂ ಕ್ಷುಲ್ಲಕ ಕಾರಣಕ್ಕೆ ಟಿವಿ ಕೈಗೆ ಸಿಕ್ಕಿಬೀಳಬೇಕು!

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಬಾಡಿಗೆ ಮನೆಗೆ ಹೋಗಬೇಕಾದರೂ ಹಾಲು ಉಕ್ಕಿಸಿಯೇ ಹೋಗಬೇಕಾ?*

ಹಾಲು ದುಬಾರಿಯಾಗಿರುವುದರಿಂದ ಉಕ್ಕುತ್ತಿರುವ ಹಾಲಿನ ಫೋಟೋ ಹಾಕಿದರೂ ಸಾಕಂತೆ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಪತಿ ಪತ್ನಿಯರಲ್ಲಿ ಇರುವ ವ್ಯತ್ಯಾಸವೇನು?*

ಬಹಳವೇ ಇರುತ್ತವೆ; ಅದಕ್ಕೇ ಆಗಾಗ್ಗೆ ಅಷ್ಟೊಂದು ಜಗಳಗಳು!

ಪಿ.ಗೋವಿಂದರಾಜ್, ಶಿವಮೊಗ್ಗ

*ಸಿನಿಮಾ ನಟಿಯರ ಬಟ್ಟೆ ಕಡಿಮೆ ಆದಂತೆ ಅವರ ಬೇಡಿಕೆ ಹೆಚ್ಚಲು ಕಾರಣವೇನು?*

ಮಾರುಕಟ್ಟೆಯೇ ಹಾಗೆ; ಚರ್ಮ ಎಂದಿಗೂ ಬಟ್ಟೆಗಿಂತ ಹೆಚ್ಚು ದುಬಾರಿ!

ಗಣೇಶ ಎಂ. ಪೈ, ಚಿಕ್ಕಮಗಳೂರು

*ನನ್ನ ಹೆಂಡತಿ ನಾನು ಸಿಟ್ಟಿಗೆದ್ದಾಗಲೆಲ್ಲ ಕಿಸಕ್ಕನೆ ನಗುವುದರ ಹಿಂದಿನ ಗೂಢಾರ್ಥವೇನು?*

ಆಕೆಗೆ ನೀವು ಕೋಪಗೊಂಡಾಗಲೆಲ್ಲಾ ತವರಿನಲ್ಲಿ ಸಾಕಿದ್ದ ಪಾಮರೇನಿಯನ್ನೇ ನೆನಪಾಗುವುದಂತೆ!

ಸವಿರವಿ, ಬಾಳೆಹೊನ್ನೂರು

*ಪೂಜೆ ಮಾಡುವಾಗ ಏಕೆ ಅಷ್ಟೊಂದು ಶಬ್ದ ಮಾಡಿಕೊಂಡು (ಗಂಟೆ, ಶಂಖ, ಜಾಗಟೆ...) ಪೂಜೆ ಮಾಡಬೇಕು?*

ವರ ಕೇಳುವವರೆಗೆ ದೇವ ನಿದ್ರಿಸದಂತೆ ನೋಡಿಕೊಳ್ಳಲು!

## ಬಹುಮಾನಿತ ಪ್ರಶ್ನೆ

ಡಿ.ದೊಡ್ಡಲಿಂಗೇಗೌಡ, ಮಳವಳ್ಳಿ

*ಬೆಳೆಯುವ ಭೂಮಿಯೆಲ್ಲಾ ನಿವೇಶನಗಳಾದರೆ ಮನುಷ್ಯ ಮುಂದೆ ತಿನ್ನಬಹುದಾದದ್ದು ಏನನ್ನು?*

ಮೀನುಗಳನ್ನು, ಪ್ರಾಣಿಗಳನ್ನು, ಪಕ್ಷಿಗಳನ್ನು, ಕಡೆಗೆ ತನ್ನನ್ನೇ! ವಿವೇಕ ಶೂನ್ಯವಾದಾಗ ವಿನಾಶ ಖಚಿತ.

ಹಾಡ್ಯ ಬಿ. ಜಯಾನಂದ, ಮೈಸೂರು

*ಬಹಳಷ್ಟು ಗಂಡಂದಿರು ವಿವಾಹದಿನವನ್ನು ಮರೆಯುತ್ತಾರಂತೆ. ಏಕೆ?*

ಯಾರೇ ಆಗಲಿ, ಅರೆಸ್ಟ್ ಆದ ದಿನವನ್ನು ಮರೆಯಲು ಯತ್ನಿಸುವುದು ಸಹಜವೇ!

ಪಟ್ಟೆಸೋಮನಹಳ್ಳಿ, ಗಾನಾಸುಮಾ, ಪಾಂಡವಪುರ

*ಸನ್ಯಾಸಿ ಕೆಡೋದು ಸಹವಾಸದಿಂದಾನಾ ಅಥವಾ ಸ್ವಯಂ ತಪ್ಪಿನಿಂದಾನಾ?*

ಸಹ–ವಾಸದಿಂದ!

ವಿ. ಹೇಮಂತಕುಮಾರ್, ಬೆಂಗಳೂರು

*ಬಿಸಿಲಿಗೆ ಛತ್ರಿ ಹಿಡಿಯುವವಳು ಮಳೆಯಲ್ಲಿ ನೆನೆಯುತ್ತಾಳಲ್ಲಾ...?*



ಛತ್ರಿ ಮಳೆಗಾಳಿಗೆ ಸಿಕ್ಕಿ ಟಿವಿ ಡಿಶ್‌ನಂತೆ ಮೇಲ್ಮುಖ ಮಾಡಿಕೊಂಡಿತಂತೆ!

ಕೇಶವ ಎನ್. ಪೈ, ಕಾಸರಕೋಡ

*ಮದುವೆಮನೇಲಿ ಹುಡುಗಿಯರ ಮುಂದೆ ಹುಡುಗರು ಭೋಜನಕ್ಕೆ ಕುಳಿತುಕೊಳ್ಳಬಾರದು. ಏಕೆ?*

ಬಾಲೆಯರು ಬಡಬಡಿಸುವುದರ ಮುಂದೆ ಬಾಳೆಯಲ್ಲಿ ಬಡಿಸಿದ್ದು ರುಚಿಸಲ್ಲ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಅಂತಿಮಯಾತ್ರೆಯ ವೇಳೆ ಶವಕ್ಕೆ ಬಿಳಿ ಬಟ್ಟೆಯನ್ನೇ ಹೊದಿಸುತ್ತಾರಲ್ಲಾ, ಯಾಕೆ?*

ಸತ್ತವರ ಕಲರ್‌ಗೆ ಮ್ಯಾಚ್ ಆಗುವಂತಹ ಬಟ್ಟೆ ತರಲು ಮೂಡ್, ಟೈಂ ಎರಡೂ ಇರುವುದಿಲ್ಲವಲ್ಲಾ!

ಬಿ. ಚಂದ್ರೇಗೌಡ, ಬೆಂಗಳೂರು

*ಅಳಿದ ಮೇಲೂ ಉಳಿಯುವುದು ಎಂದರೇನು?*

ನೇತ್ರದಾನ, ದೇಹದಾನ ಮಾಡುವುದು!

■ ರಾಮ್